ಮಾತನಾಡುತ್ತೇನೆ

ಅಧ್ಯಕ್ಷರು ಸದ್ಯಕ್ಕೆ ನಿಮ್ಮಲ್ಲಿ ಮಾಹಿತಿ ಇಲ್ಲ, ಆಯಿತು ಗಮನಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳೋಣ, ಪಿ ಸಿ ಮೋಹನ್ ಅವರು ಬಂದಿಲ್ಲ, ಲಾಲಾಜಿ ಮೆಂಡನ್ ಅವರು ಮಾತನಾಡುವುದು

3 ಗಮನ ಸೆಳೆಯುವ ಸೂಚನೆ

ವಿಷಯ ಕಾಪು ಕ್ಷೇತ್ರಕ್ಕೆ ಬಯಲು ರಂಗಮಂದಿರ ಮಂಜೂರು ಮಾಡುವ ಬಗ್ಗೆ

ಶ್ರೀ ಲಾಲಾಜಿ ಆರ್ ಮೆಂಡನ್ ಕಾಪು ಮಾನ್ಯ ಅಧ್ಯಕ್ಷರೆ, ಕಾಪು ಕ್ಷೇತ್ರಕ್ಕೆ ಬಯಲು ರಂಗಮಂದಿರ ಮಂಜೂರು ಮಾಡುವ ಬಗ್ಗೆ ಕನ್ನಡ ಮತ್ತು ಸಂಸ್ಕೃತಿ ಸಚಿವರ ಗಮನ ಸೆಳೆಯುತ್ತಾ, ನಮ್ಮ ಕಾಪು ಕ್ಷೇತ್ರ ನಮ್ಮ ಉಡುಪಿ ಜಿಲ್ಲೆಯಲ್ಲಿ ಬರುವುದರಿಂದ ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ ಬಹಳ ಮುಂದುವರೆದ ಜಿಲ್ಲೆಯಾಗಿದೆ ನಮ್ಮ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಯಕ್ಷಗಾನ, ಜಾನಪದ, ನಾಟಕಗಳೆಲ್ಲಾ ಬಹಳ ಪ್ರಸಿದ್ಧಿಯಾಗಿದೆ ಇಂತಹ ಒಂದು ಕಲೆಗೆ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ನಮ್ಮ ಕಾಪು ಕ್ಷೇತ್ರ ನಮ್ಮ ರಾಷ್ಟ್ರೀಯ ಹೆದ್ದಾರಿ ಬರುವ ಬಂಗಲೆ, ಮೈದಾನ ಪ್ರದೇಶದಲ್ಲಿ ಬಯಲು ರಂಗಮಂದಿರ ಅವಶ್ಯಕತೆ ಇದೆ ಈಗಾಗಲೆ ಅಲ್ಲಿಯ ಸ್ಥಳೀಯ ಬಂಗಲೆ ಮೈದಾನ ಪ್ರದೇಶಗಳಲ್ಲಿ ಸ್ವಾತಂತ್ರೋತ್ಸವ, ಗಣ ರಾಜ್ಯೋತ್ಸವ ಹಾಗು ಇತರೆ ಶಾಲಾ ಕಾಲೇಜುಗಳ ವಿವಿಧ ಕಾರ್ಯಕ್ರಮಗಳು, ಚಟುವಟಿಕೆಗಳೆಲ್ಲಾ ಅಲ್ಲಿ ನಡೆಯುತ್ತಿದೆ, ಜೊತೆಗೆ ನಮ್ಮಲ್ಲಿ ಹವ್ಯಾಸಿ ವೃತ್ತಿಪರ ನಾಟಕತಂಡಗಳಿವೆ, ಯಕ್ಷಗಾನ ವಿಶೇಷವಾಗಿದೆ ಹಾಗಾಗಿ ಆ ಒಂದು ಬಯಲು ರಂಗಮಂಟಪವನ್ನು ಉತ್ತಮಗೊಳಿಸಿ ನಮಗೊಂದು ರಂಗ ಮಂಟಪವನ್ನು ಕೂಡ ಕೊಟ್ಟರೆ ನಮ್ಮ ಸಾಂಸ್ಕೃತಿಕ ಕಲೆಗೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ ಜೊತೆಗೆ ಇದು ರಾಷ್ಟ್ರೀಯ ಹೆದ್ದಾರಿಯಲ್ಲೇ ಇರುವುದರಿಂದ ವಾಹನ ಸೌಕರ್ಯಕ್ಕು ಕೂಡ ಬಹಳ ಅನುಕೂಲವಿದೆ

ಅಧ್ಯಕ್ಷರು ಗಮನ ಸೆಳೆಯುವುದೆಂದರೆ, ನಿಂತುಕೊಂಡು ಭಾಷಣ

ಮಾಡುವುದೆಂದು ತಿಳಿದುಕೊಂಡಿರೇನು? ನೀವೇನು ಕಳುಹಿಸಿದ್ದೀರಿ ಓದಿ, ಉತ್ತರ ಕೊಡುತ್ತಾರೆ, ಏನಾದರು ಕ್ಲಾರಿಷಿಕೇಷನ್ ಇದ್ದರೆ ತೆಗೆದುಕೊಳ್ಳಿ ಸ್ವಾಮಿ, ಇದೇನಿದು ?

ಶ್ರೀ ಎಂ ಪಿ ಪ್ರಕಾಶ್ [ಗೃಹ ಸಚಿವರು, ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ]

ಕಾಪುವಿನ ಸ್ಥಳೀಯವಾದ ಕಲೆಗಳನ್ನು ಉತ್ತೇಜಿಸಲು ಸುಸಜ್ಜಿತವಾದ ಬಯಲು ರಂಗಮಂದಿರವನ್ನು ನಿರ್ಮಾಣ ಮಾಡುವಂತೆ ಇಲಾಖೆಗೆ ಯಾವುದೇ ಬೇಡಿಕೆ ಬಂದಿರುವುದಿಲ್ಲ

ಕರ್ನಾಟಕ ಸರ್ಕಾರವು ಸುತ್ತೋಲೆಯನ್ನು ಹೊರಡಿಸಿ ಗ್ರಾಮೀಣ ಪ್ರದೇಶದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಹಾಗೂ ಸ್ಥಳೀಯ ಸಂಘ ಸಂಸ್ಥೆಗಳ ಸಹಯೋಗ ದೊಂದಿಗೆ ಬಯಲು ರಂಗಮಂದಿರವನ್ನು ನಿರ್ಮಿಸುವ ಉದ್ದೇಶದಿಂದ ಬಯಲು ರಂಗಮಂದಿರಗಳ ಯೋಜನೆಯನ್ನು ಜಿಲ್ಲಾ ಪಂಚಾಯಿತಿಗೆ ವರ್ಗಾಯಿಸಲಾಗಿದೆ ಅದರಂತೆ ನಿರ್ಮಾಣಗೊಂಡಿರುವ 222 ಬಯಲು ರಂಗ ಮಂದಿಗಳನ್ನು ಜಿಲ್ಲಾ ಪಂಚಾಯತಿಯ ವ್ಯಾಪ್ತಿಗೆ ಒಳಪಡಿಸಲಾಗಿದೆ ಈ 222 ಬಯಲು ರಂಗ ಮಂದಿಗಳಲ್ಲಿ 140 ಪೂರ್ಣಗೂಂಡಿದ್ದು, 82 ಬಯಲು ರಂಗ ಮಂದಿರಗಳು ಅಪೂರ್ಣವಾಗಿದ್ದು, ಸಂಬಂಧಿತರು ಸ್ಥಳೀಯ ಸಂಪನ್ಮೂಲ ಕ್ರೋಢೀಕರಿಸಿ ಬಯಲು ರಂಗ ಮಂದಿರಗಳನ್ನು ಪೂರ್ಣಗೂಳಿಸಬೇಕಾಗಿದೆ

ನಗರಸಭೆ, ಪುರಸಭೆಗಳ ವ್ಯಾಪ್ತಿಗೆ ಬರುವ ಬಯಲು ರಂಗ ಮಂದಿರಕ್ಕೆ ಸಂಬಂದಿಸಿತ ಯೋಜನೆಯನ್ನು ರಾಜ್ಯ ವಲಯದಲ್ಲಿಯೇ ಮುಂದು ವರಿಸಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಗೆ ಒಟ್ಟು 60 ಬಯಲು ರಂಗ ಮಂದಿರಗಳು ಒಳಪಟ್ಟಿವೆ ಈ 60 ಬಯಲು ರಂಗ ಮಂದಿರಗಳಲ್ಲಿ 31 ಬಯಲು ರಂಗ ಮಂದಿರಗಳು ಪೂರ್ಣವಾಗಿದ್ದು, 29 ಬಯಲು ರಂಗ ಮಂದಿರಗಳು ಅಪೂರ್ಣವಾಗಿದ್ದು, ಸಂಬಂದಿತರು

ಸ್ಥಳೀಯ ಸಂಪನ್ಮೂಲ ಕ್ರೋಢೀಕರಿಸಿ ಪೂರ್ಣಗೊಳಿಸಬೇಕಾಗಿದೆ

ಉಡುಪಿ ಜಿಲ್ಲೆಗೆ ಸಂಬಂದಿಸಿದಂತೆ ಕಾಪುವಿನ ಕ್ಷೇತ್ರ ವ್ಯಾಪ್ತಿಯಲ್ಲಿ ಬಯಲು ರಂಗ ಮಂದಿರ ನಿರ್ಮಿಸಲು ಸ್ಪಂದನ ಸಾಂಸ್ಕೃತಿಕ ಕಲಾ ವೇದಿಕೆ, ಕುಂಜಾಲುಗಿರಿ, ಕುರ್ತಾಲು ಗ್ರಾಮ ಪಂಚಾಯಿತಿ, ಉಡುಪಿ ತಾಲ್ಲೂಕು ಇವರಿಗೆ ಉಡುಪಿ ಜಿಲ್ಲಾ ಪಂಚಾಯಿತಿಯಿಂದ ರೂ 50 000 –00 ಗಳ ಬಿಡುಗಡೆಗೆ ಕ್ರಮ ಕೈಗೊಳ್ಳಲಾಗಿದೆ

ಆ) ವಿಷಯ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 13 ರಲ್ಲಿರುವ ಆಲೂರಿನ ಆಸ್ಪತ್ರೆ ಮತ್ತು ರಸ್ತೆ ಸುಧಾರಣೆ ಬಗ್ಗೆ

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಂಟುಂಬ ಕಲ್ಯಾಣ ಸಚಿವರು)

ಆಲೂರು ಗ್ರಾಮ ರಾಷ್ಟ್ರೀಯ ಹೆದ್ದಾರಿ–13ರ ರಿಂದ 2 ಕಿ ಮೀ ಒಳಗಿರುತ್ತದೆ ಇಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವು ಕಾರ್ಯನಿರ್ವಹಿಸುತ್ತದೆ ರಾಜ್ಯ ಸರ್ಕಾರವು ದಿನಾಂಕ 2/6/2007ರಂದು ಹೊರಡಿಸಿರುವ ಆದೇಶದ ಪ್ರಕಾರ 516 ಪ್ರಾಥಮಿಕ ಆರೋಗ್ಯ ಘಟಕಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಿದೆ ಅದರಲ್ಲಿ ಇದು ಕುಡ ಒಂದಾಗಿದೆ ವಿಶೇಷ ಪ್ಯಾಕೇಜ್ ಅಡಿಯಲ್ಲಿ ಸದರಿ ಆರೋಗ್ಯ ಕೇಂದ್ರಕ್ಕೆ ಆಪರೇಷನ್ ಧಿಯೇಟರ್ ಹಾಗೂ ಹೆರಿಗೆ ವಾರ್ಡಗಳನ್ನು ಹೂಸದಾಗಿ ಕಟ್ಟುವ ಕಾಮಗಾರಿ ಪ್ರಾರಂಭವಾಗಿರುತ್ತದೆ ಅದೇ ತರಹ ವೈದ್ಯರ ವಸತಿ ಗೃಹ ಸಹ ಇದೇ ಪ್ಯಾಕೇಜ್‌ನಲ್ಲಿ ತೆಗೆದುಕೊಳ್ಳಲಾಗಿದೆ, ಈ ಕಾಮಗಾರಿಯು ಇನ್ನೂ ಪೂರ್ಣಗೊಂಡಿರುವುದಿಲ್ಲ

ಇಲ್ಲಿ ಎರಡು ಕಿರಿಯ ಮಹಿಳಾ ಆರೋಗ್ಯ ಸಹಾಯಕಿ ಹಾಗೂ "ಡಿ" ವರ್ಗದ ವಸತಿ ಗೃಹಗಳು ಸಹ ಇರುತ್ತದೆ ಇದರಲ್ಲಿ ಅವರುಗಳು ವಾಸವಾಗಿರುತ್ತಾರೆ

ದಿನಾಂಕ 13/5/2007ರಂದು ಬೆಳಗಿನ ಝಾವ ಸುಮಾರು 5 00